**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 1326/2025**

**ಫಿರ್ಯಾದುದಾರರು** ಶ್ರೀ ಗುರುಕೃಪಾ ಪತ್ತಿನ ಸಹಕಾರಿ ಸಂಘ, ನಿಯಮಿತ, ಭಟ್ಕಳ,
ಪ್ರತಿನಿಧಿಸುವವರು ಇದರ ಸಹಾಯಕ ಕಾರ್ಯನಿರ್ವಾಹಕರು
ಶ್ರೀ ಪಾಂಡು ತಂದೆಃ ನಾರಾಯಣ ನಾಯ್ಕ,

**– ವಿರುದ್ಧ –**

**ಆರೋಪಿತರು** ಶ್ರೀ ಅಶೋಕ ಮಾದೇವ ನಾಯ್ಕ,
ವಯಸ್ಸುಃ 36 ವರ್ಷ
ಸಾಃ ಮನೆ ನಂ.157 ಎ, ತಲಗೊಡಮನೆ,
ತಲಾನ ಗ್ರಾಮ, ಮುಟ್ಟಳ್ಳಿ, ಭಟ್ಕಳ ತಾಲೂಕು.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 26-07-2022 ರಂದು ಪಿರ್ಯಾದಿ ಸಂಸ್ಥೆಯಿಂದ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ವೈಯಕ್ತಿಕ ಸಾಲವಾಗಿ ಶೇಕಡಾ 15% ಬಡ್ಡಿ ದರದಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಸದ್ರಿ ಸಾಲವನ್ನು ನಿಗದಿತ ಅವಧಿಯಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ಪಿರ್ಯಾದಿ ಸಂಸ್ಥೆಗೆ ಕೆಲವು ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಹೀಗೆ ಸಾಲ ಪಡೆಯುವಾಗ ಒಪ್ಪಿಕೊಂಡ ಕಂತಿ ಪ್ರಕಾರ ನೀವು ಪಿರ್ಯಾದಿ ಸಂಸ್ಥೆಗೆ ಅಸಲು ಹಾಗೂ ಬಡ್ಡಿ ಪಾವತಿ ಮಾಡದ ಕಾರಣ ಸದ್ರಿ ಸಾಲವು ಕಟ್ ಬಾಕಿಯಾಗಿರುತ್ತದೆ. ದಿನಾಂಕಃ 10-02-2025 ರ ತನಕ ಅಸಲು ಬಡ್ಡಿ ಸೇರಿ ಒಟ್ಟೂ ರೂ. 1,19,740/-( ರೂಪಾಯಿ ಒಂದು ಲಕ್ಷದ ಹತ್ತೊಂಭತ್ತು ಸಾವಿರದ ಏಳುನೂರ ನಲವತ್ತು ಮಾತ್ರ) ಬಾಕಿ ಇರುತ್ತದೆ. ನಂತರ ಸದ್ರಿ ಸಾಲವನ್ನು ಮರುಪಾವತಿಸುವಂತೆ ನಿಮ್ಮಲ್ಲಿ ಕೇಳಿಕೊಂಡಾಗ, ನೀವು ಸದ್ರಿ ಸಾಲದ ಮರುಪಾವತಿಗಾಗಿ ನೀವು ಹೆಚ್.ಡಿ.ಎಫ್.ಸಿ ಬ್ಯಾಂಕ್, ಹೊನ್ನಾವರ ಶಾಖೆಯ ಚೆಕ್ ನಂ.000013 ನ್ನು ರೂ. 1,19,740/-( ರೂಪಾಯಿ ಒಂದು ಲಕ್ಷದ ಹತ್ತೊಂಭತ್ತು ಸಾವಿರದ ಏಳುನೂರ ನಲವತ್ತು ಮಾತ್ರ) ಕ್ಕೆ ದಿನಾಂಕಃ 10-02-2025 ಚೆಕ್ ಅನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಘದವರು ಅವರ ವ್ಯವಹಾರದ ಬ್ಯಾಂಕಾದ ದಿ. ಭಟ್ಕಳ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್, ಭಟ್ಕಳ ಮುಖ್ಯ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 12-02-2025 ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 04-03-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ನೋಟಿಸು ತಲುಪಿದ 15 ದಿನಗಳೊಳಗೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸಿರುತ್ತೀರಿ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 09-10-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.